ಎಲ್ಲವೂ ವ್ಯರ್ಥ! ಸಂಸಾರ ಅನ್ನೋದು ಬರೇ ಸ್ವಾರ್ಥದ ಗೂಡಾಗಿ ಕಾಣುತ್ತದೆ ಎಂದು ನೊಂದುಕೊಳ್ಳುತ್ತಲೇ ಅಜಯ್ ಮನೆಯಿಂದ ಹೊರಗೆ ನಡೆದಿದ್ದ.

ಖಾಲಿ ಹೊಟ್ಟೆಯಲ್ಲೇ ಎದ್ದು ಬಂದುದರಿಂದ ಹಸಿವು ಅಜಯ್‌ನನ್ನು ಬಲವಾಗಿ ಕಾಡುತ್ತಿತ್ತು. ಎಲ್ಲಾದರೂ ಹೊಟೇಲ್ ಬೋರ್ಡ್ ಕಾಣಿಸುವುದೋ ಎಂದು ಹುಡುಕುತ್ತಾ ಕಾರು ಚಲಾಯಿಸುತ್ತಿದ್ದ. ಅತ್ತ ಸಿಟಿಯೂ ಅಲ್ಲದ, ಪೂರಾ ಹಳ್ಳಿಯೂ ಅಲ್ಲದ ಊರದು. ಸುಮಾರು ದೂರದವರೆಗೆ ಎಲ್ಲೂ ಹೊಟೇಲ್ ಕಾಣಿಸಲಿಲ್ಲ. ಇಂದು ಯಾವುದಾದರೂ ಹೊಸ ಜಾಗಕ್ಕೆ ಹೋಗೋಣ ಎಂದೆನಿಸಿದರೂ ಕದಡಿದ ಮನಸ್ಸು ದಟ್ಟ ಹಸಿರಿನಂಥ ಏಕಾಂತದ ವಾತಾವರಣವನ್ನೇ ಬಯಸಿತು. ಸಹ್ಯಾದ್ರಿ ಬೆಟ್ಟಗಳತ್ತ ಪ್ರಯಣಿಸುತ್ತಿದ್ದ. ಪಶ್ಚಿಮಘಟ್ಟದ ತಪ್ಪಲಿನ ಕೆಲವು ಹಳ್ಳಿಗಳೊಳಗೊಂದಾಗಿ ಸಂಚರಿಸುತ್ತಾ, ವಿಸ್ಮಯಿಸುವ ಹಸಿರು ರಾಶಿಯ ನಡುವೆ ಸಿಗುತ್ತಿದ್ದ ಝರಿ, ಜಲಪಾತ, ತೋಡು, ತೊರೆಗಳ ಸೌಂದರ್ಯಕ್ಕೆ ಮೆಲ್ಲನೇ ಉಲ್ಲಸಿತನಾಗುತ್ತ ಸಾಗುತ್ತಿದ್ದ. ಮಧ್ಯಾಹ್ನದ ಹೊತ್ತಿಗೆ ಆಗುಂಬೆ ಘಾಟ್ ಏರಿ ಶೃಂಗೇರಿ ದಾರಿಯಿಂದ ಮಲೆನಾಡಿನತ್ತ ಸಾಗಿದ. ಈ ನಡುವೆ ಆಫೀಸಿನಿಂದ ಬಂದ ಕರೆಗಳಿಗೆ, 'ನಾನೀವತ್ತು ಖಾಸಗಿ ಕೆಲಸದ ಮೇಲೆ ಹೊರಗೆ ಹೋಗುತ್ತಿದ್ದೇನೆ. ನಾಳೆ ಹೊತ್ತಿಗೆ ಹಿಂದಿರುಗುತ್ತೇನೆ' ಎಂದು ಹೇಳಿ ಮೊಬೈಲ್ ಸೈಲೆಂಟ್ ಗೊಳಿಸಿದ. ಮನೆಯಿಂದ ಹೊರಟು ತುಸುದೂರ ಬಂದ ನಂತರ ಏನಾದರೂ ತಿನ್ನೋಣವೆನಿಸಿದರೂ ಬೆಳಗಿನ ಕಲಹವನ್ನು ನೆನೆದು ಏನೂ ಒಗ್ಗದಂತಾಗಿ ಮುಂದೆ ಹೊರಟ. ಆದರೆ ಈಗ ಹಸಿವು ಹೆಚ್ಚಿ, ಮೈಮನಸಿನ ಚೈತನ್ಯ ಉಡುಗುತ್ತಿರುವಂತೆನಿಸಿತು.

ವಿರಳವಾದ ಜನಸಂದಣಿಯಿಂದ ಕೂಡಿರುತ್ತಿದ್ದ, ಹಸಿರು ಹಾಸಿದಂಥ ಮಟ್ಟಸವಾದ ಮಲೆನಾಡಿನುದ್ದಗಲಕ್ಕೂ ಹಗುರವಾಗಿ ಸಂಚರಿಸುವುದು ಅಜಯ್‌ಗೆ ಮೊದಲಿನಿಂದಲೂ ಇಷ್ಟವಾದ ಅನುಭವ. ಈ ಹಿಂದೆಯೂ ಸಾಕಷ್ಟು ಭಾರಿ ಈ ಕಡೆಗೆ ಬಂದಿದ್ದ. ಆದರೆ ಆವಾಗಿನ ಮನಸ್ಥಿತಿಯೇ ಬೇರಿತ್ತು. ಈವತ್ತಿನ ಮೂಡೇ ಬೇರಾಗಿದೆ. ಅದಕ್ಕೆ ತಕ್ಕಂತೆ ಪರಿಸರವೂ ಅವನ ಉದಾಸಿ ಮನಸ್ಸಿನ ಭಾವಲಹರಿಗಳನ್ನು ಪ್ರಚೋದಿಸುವಂತೆ ವಿಚಿತ್ರ, ವಿಲಕ್ಷಣ ದೃಶ್ಯಾವಳಿಗಳನ್ನು ಹೊಮ್ಮಿಸುತ್ತಾ ಸಾಗುತ್ತಿತ್ತು. ಅಷ್ಟೊತ್ತಿಗೆ 'ಊಟ ತಯಾರಿದೆ' ಎಂಬ ತುಕ್ಕು ಹಿಡಿದು ಮಸುಕಾದ ಬೋರ್ಡ್ ಒಂದು ಕಾಣಿಸಿತು. 'ಅಬ್ಬಾ ದೇವ್ರೇ, ಬದುಕಿದೆ' ಎಂದುಕೊಂಡವನು, ಸರಕ್ಕನೇ ಕಾರಿನ ವೇಗಕ್ಕೆ ಬ್ರೇಕ್ ಹಾಕಿ ಹೊಟೇಲಿನ ಎದುರು ಹೋಗಿ ನಿಲ್ಲಿಸಿದ. ಬಿದಿರಿನ ಗಳುಗಳಿಗೆ ಹನೆ, ಬೈನೆಮರಗಳ ಸೋಗೆಗಳನ್ನು ಹೆಣೆದು ಕಟ್ಟಿದ್ದ ತಟ್ಟಿಯ ಹೊಟೇಲ್ ಅದು. ಎರಡು ಮೂರು ಹಳೆಯ ಹರ್ಕ್ಯುಲಸ್ ಸೈಕಲ್‌ಗಳು ಹೊಟೇಲಿನೆದುರು ಸೊಂಟ ವಾಲಿಸಿಕೊಂಡು ನಿಂತಿದ್ದವು. ಪಕ್ಕದಲ್ಲೊಂದು ಪೆಟ್ಟಿಗೆ ಮಾದರಿಯ ಪಾನ್ ಶಾಪ್. ಅದರ ಸ್ವಲ್ಪ ದೂರದಲ್ಲಿ ಘನವಾಹನ ರಿಪೇರಿಯ ಗ್ಯಾರೇಜು, ಅದರೆದುರು ಓಬಿರಾಯನ ಕಾಲದ, ಜೋಕರ್ ಮೂತಿಯ ಲಾರಿಯೊಂದು ಬಾಯ್ದೆರೆದು ನಿಂತುಕೊಂಡು ಫಿಟರ್‌ಗಳಿಂದ ದುರಸ್ತಿಗೊಳ್ಳುತ್ತಿತ್ತು.

ಅಜಯ್, ಕಾರು ತಂದು ನಿಲ್ಲಿಸಿದ ರಭಸಕ್ಕೆ, ಇಳಿದ ಗತ್ತಿಗೆ ಒಂದು ಕ್ಷಣ ಹೊಟೇಲ್ ಗಿರಾಕಿಗಳೊಂದಿಗೆ, ಅಲ್ಲಿದ್ದವರೆಲ್ಲರ ಗಮನ ಅವನತ್ತಲೇ ಹರಿಯಿತು. ಕೊಂಚ ಅಳುಕಿದ. ಆದರೆ ಕೆಂಪು ಬಣ್ಣದ ಅವನ ಹೊಸ ಕಾರು ಒಳಗಿನ 'ಅಹಂ' ಅನ್ನು ತಟ್ಟ ಎಬ್ಬಿಸಿತು. ಎದೆ ಸೆಟೆಸಿ, ಅಂಗಿಯ ಗುಂಡಿಗೆ ಸಿಲುಕಿಸಿದ್ದ ಕೂಲಿಂಗ್ ಗ್ಲಾಸನ್ನು ಸ್ಟೈಲ್ ಆಗಿ ಮೇಲೆಳೆದ. ಚಕಚಕನೆ ಎದೆಯುಬ್ಬಿಗೆ ತಿಕ್ಕಿ, ಹಕ್! ಹಕ್! ಎಂದು ಉಸಿರಿನ ಬಿಸಿಗಾಳಿ ಗಾಜುಗಳಿಗೆ ಚಿಮ್ಮಿಸಿ ಮತ್ತೊಮ್ಮೆ ಒರೆಸಿ ಕಣ್ಣೇರಿಸಿ ಹೊಟೇಲಿನತ್ತ ಹೆಜ್ಜೆ ಹಾಕಿದ. ಅವರೆಗೆ ದುರುಗುಟ್ಟಿ ನೋಡುತ್ತಿದ್ದ ಕೆಲವು ದೃಷ್ಟಿಗಳಲ್ಲಿ ಅವನ ಆ ವರ್ತನೆಯಿಂದ ಗೊಂದಲ ಹುಟ್ಟಿದಂತೆನಿಸಿತು. ಯಾರೀತ? ಸರಕಾರಿ ಅಧಿಕಾರಿಯೋ? ಸಿವಿಲ್ ಡ್ರೆಸ್‌ನಲ್ಲಿರುವ ಪೋಲಿಸೋ ಅಥವಾ...? ಎಂಬಂಥ ಕುತೂಹಲ, ಅಂಜಿಕೆಯಿಂದ ಕೂಡಿದ ಪೇಲವ, ವ್ಯಂಗ್ಯದ ನಗೆಗಳು, ಹಿಂದಿನ ಭಾಗ್ಯಜ್ಯೋತಿ ಕರೆಂಟಿಗೆ ಬೇಕೋ ಬೇಡವೋ ಎಂಬಂತೆ ಉರಿವ ಬಲ್ಬುಗಳಂತೆ ಬೆಳಗಿದವು. ಅವನು ಹೊಟೇಲ್ ಪ್ರವೇಶಿಸುವವರೆಗೂ ಹಿಂಬಾಲಿಸಿದವು. ಆದರೆ ಅದೇ ಗತ್ತು ಅವನಲ್ಲಿ ಹೆಚ್ಚು ಹೊತ್ತು ಉಳಿಯಲು ಹಸಿವು ಬಿಡಲಿಲ್ಲ. ಹಾಗಾಗಿ ತಾನೂ ಪ್ರತಿಯಾಗಿ ಮುಗುಳು ನಕ್ಕು ಒಳ ಹೊಕ್ಕ.

ಅಲ್ಲೇ ಹೊರ ಮೂಲೆಯಲ್ಲಿ, ಅಲ್ಯುಮಿನಿಯಂ ಪಾತ್ರೆಯಲ್ಲಿದ್ದ ನೀರಿನಿಂದ ಕೈತೊಳೆದು ಮುರುಕಲು ಬೆಂಚಿನ ಮೇಲೆ ಹೋಗಿ ಕುಳಿತ. ಅದು ಕಿರ್ರಾಂ! ಕರ್ರಾಂ! ಎಂದು ಆರ್ತನಾದವೆಬ್ಬಿಸಿ ಅವನ ಭಾರವನ್ನು ಸಂಭಾಳಿಸಿಕೊಂಡಿತು. ಎಲ್ಲಿ ಮುರಿದು ಬೀಳುವುದೋ ಎಂದು ಆತಂಕವೆದ್ದರೂ, ಇಂಥ ಹೊಟೇಲಿನ ಬೆಂಚುಗಳೇ ಹಾಗೆ, ಬಂದು ಕುಳಿತವರೆಲ್ಲರ ಭಾರವನ್ನು ಹೀಗೆಯೇ ಕಿರುಚಿ, ಹೊತ್ತು ಸಂಭಾಳಿಸಿಕೊಳ್ಳುತ್ತವೆ ಎಂದುಕೊಂಡ.

'ಏಯ್...ಕ್ಲೀನ್ ಮಾಡೆಲೇ..' ಎಂದು ಕುಳ್ಳಗಿನ, ದಡೂತಿ ಮಾಲಕನ ಕಂಚಿನ ಕಂಠದ ಕೂಗನ್ನು ಅಪಾಯದ ಕರೆಗಂಟೆ ಎಂದೇ ಭಾವಿಸಿದಂತಿದ್ದ ನಲ್ವತ್ತರ ಹರೆಯದನೊಬ್ಬ ತನ್ನ ಪಾರ್ಶ್ವವಾಯು ಪೀಡಿತ ದೇಹವನ್ನೆಳೆದುಕೊಂಡು ಬಂದು ಹಲ್ಲು ಕಿರಿಯುತ್ತಾ ಟೇಬಲ್ ಕ್ಲೀನ್ ಮಾಡಿ ಹೋಗಿ, ಒಂದು ಪಾರ್ಶ್ವದ ಗೋಡೆಗೊರಗಿ ನಿಂತ. ಅವನ ಬೆನ್ನಿಗೇ ಗಲ್ಲಾ ಪೆಟ್ಟಿಗೆ ಇಳಿದು, ದೊಗಳೆ ಚಡ್ಡಿ ಅರ್ಧ ಕಾಣುವಂತೆ ಚಚ್ಚೌಕಳಿಯ ಲುಂಗಿಯನ್ನೆತ್ತಿ ಕಟ್ಟಿಕೊಂಡು ಒಳಗೆ ಹೋದ ಮಾಲಕ ಅದೇ ವೇಗದಲ್ಲಿ ಬಂದವನು, ಬಾಳೆ ಎಲೆ ಹಾಕಿ, ನೀರು ಚಿಮುಕಿಸಿ ತಾನೇ ಒರೆಸಿ, ಅನ್ನ ಬಡಿಸಿ ಬೂತಾಯಿ ಮೀನಿನ ಸಾರು ಸುರುವಿದಾಗ, ಅಜಯ್‌ಗೆ ಅಮೃತ ಸಿಕ್ಕಂತಾಯಿತು.

ಗಬಗಬನೇ ಎರಡು ಮುಷ್ಟಿ ಉಣ್ಣಬೇಕು ಎಂಬಷ್ಟರಲ್ಲಿ 'ಹ್ಹೆಹ್ಹೆಹ್ಹೇ...ಮೀನೇನ್ ಕೊಡ್ಲಿ? ಬೂತಾಯಿ, ಬಂಗುಡೆ ಇದೆ. ಕಾಟ್ಲ ಇದೆ. ಚಿಕನ್ ಸುಕ್ಕ ಇದೆ. ಕಾಟ್ಲ ನಮ್ಮೂರಿನ್ ಹೊಳೇದು. ಇವತ್ತೇ ಬಲೆ ಬೀಸಿ ತಂದಿದ್ದು. ಫ್ರೆಶ್ ಇದೆ. ಕಾಟ್ಲ ಮಸಾಲ, ಕಾಟ್ಲಾ ಫ್ರೈ ಕೂಡಾ ಇದೆ ಏನ್ಕೊಡ್ಲಿ?' ಎಂದ.

'ಹೇ ಏನಾದರೊಂದು ಕೊಡ್ರೀ' ಎನ್ನುವಷ್ಟು ಹಸಿದಿದ್ದರೂ ಸಾವರಿಸಿಕೊಂಡ. 'ಸಪ್ಪೆ ನೀರಿನ ಮೀನು ಅಂದ್ರೆ ತನಗೆ ಒಗ್ಗದು. ಉಪ್ಪುನೀರಿನ ಬಂಗುಡೆನೇ ವಾಸಿ' ಎನಿಸಿ ಆರ್ಡರ್ ಮಾಡಿದ. ಹಸಿದ ಹೊಟ್ಟೆಗೆ ಅನ್ನ ಸಿಕ್ಕಿದ ಖುಷಿಯಿಂದಲೋ ಏನೋ, ಅಜಯ್‌ಗೆ ಹೊಟೇಲು ಮಾಮೂಲಿಯಾಗಿ ಕಂಡಿದ್ದರೂ ತಾಜಾ ಭೋಜನ ತೃಪ್ತಿ ನೀಡಿತ್ತು.

ಗಲ್ಲೆಯಲ್ಲಿ ಕುಳಿತು ಅಜಯ್‌ನನ್ನು ಗಮನಿಸುತ್ತಿದ್ದ ಮಾಲಕ 'ಹ್ಹೆಹ್ಹೆಹ್ಹೇ...ಏನ್ ಈ ಕಡೀಗೆ ಬಂದ್ರೀ, ವಿಶೇಷವಿತ್ತೇ? ಯಾವೂರ್ ನಿಮ್ದು?' ಎಂದು ಪೂರ್ವಾಪರ ವಿಚಾರಿಸುವ ಆಸಕ್ತಿ ತೋರಿದ.

'ಸ್ವಲ್ಪ ಕೆಲ್ಸವಿತ್ತು. ಹಾಗೆ ಬಂದೆ. ನನ್ನೂರು ಉಡುಪಿ. ನಿಮ್ಮೂರಲ್ಲಿ ನೋಡುವಂಥ ವಿಶೇಷವೇನಾದರೂ ಇದೆಯೇ?' ಎಂದು ಅಜಯ್ ಪ್ರಶ್ನಿಸಿದ.

'ಇದು ಮಲೆನಾಡಲ್ವಾ ಸಾರ್...ಇಲ್ಲೇನು ನೋಡುವುದಕ್ಕುಂಟು! ಬರೇ ಕಾಡುಗುಟ್ಟ ನೋಡ್ಬೋದು. ಅದು ಬಿಟ್ಟರೆ ಹಳೇಕಾಲದ ರಾಜರ ಪಾಳು ಬಿದ್ದ ಕೆಲವು ಕೋಟೆ ಕೊತ್ತಲುಗಳಿವೆ. ಅವನ್ನು ನೋಡಬೇಕಷ್ಟೆ. ನೀವು ಹೊಸಬರಲ್ಲವಾ, ಚಂದ ಕಂಡೀತು. ಇಲ್ಲೇ ಒಂದಿಪ್ಪತ್ತು ಕಿಲೋಮೀಟರ್ ಮುಂದೆ ಹೋದರೆ ಅವೆಲ್ಲಾ ಸಿಗುತ್ತವೆ. ಹ್ಹೆಹ್ಹೆಹ್ಹೇ...' ಎಂದ.

'ಆಯ್ತು, ಥ್ಯಾಂಕ್ಸ್' ಎಂದು ಊಟ ಮಾಡಿ ಬಿಲ್ ಕೊಟ್ಟು ಅಜಯ್ ಹೊರಗೆ ಬಂದ. ಆತನನ್ನು ಕಂಡ ಬೀಡಾ ಶಾಪಿನವ ಮಂದಹಾಸ ಬೀರಿದ. ಬೀಡ ತಿನ್ನುವ ಅಭ್ಯಾಸವಿರದಿದ್ದರೂ ಅವನನ್ನು ನಿರಾಶೆಗೊಳಿಸಲಿಚ್ಛಿಸದೆ ಭಾರವೆನಿಸಿದ ಹೊಟ್ಟೆಯೊಳಗಿನ ಕವಳ ಕರಗಿಸುವ ನೆಪದಲ್ಲೊಂದು ಸಾದಾ ಬೀಡಕ್ಕೆ ಆರ್ಡರ್ ಮಾಡಿ ಸುತ್ತಲೂ ಕಣ್ಣಾಡಿಸುತ್ತಾ ನಿಂತುಕೊಂಡ.

* * *

ಹೊಟೇಲಿನಿಂದ ಹತ್ತು ಗಜ ದೂರದಲ್ಲಿ ಸುಮಾರು ಇನ್ನೂರು ವರ್ಷಗಳಷ್ಟು ಹಳೆಯದಿರಬಹುದಾದ ದೈತ್ಯ ಬಸರಿ ಮರವೊಂದು ಸೊಂಪಾಗಿ ಬೆಳೆದು ವಿಶಾಲವಾಗಿ ಹರಡಿ ನಿಂತಿತ್ತು. ಅದರ ಬೆಳವಣಿಗೆಯ ಒತ್ತಡಕ್ಕೆ ಬಿರುಕು ಬಿಟ್ಟಿದ್ದ ಕಟ್ಟೆಯ ಮೇಲೆ ಸೊಂಬೇರಿಗಳಂತೆ ಕುಳಿತು ಕಾಡು ಹರಟೆಯಲ್ಲಿತೊಡಗಿದ್ದ ಇಬ್ಬರು ಮಧ್ಯವಯಸ್ಕರು, ಅಜಯ್ ಹೊರಬರುವುದನ್ನೇ ಕಾಯುತ್ತಿದ್ದವರಂತೆ ತಟ್ಟನೆ ಚುರುಕಾದರು. ಅವರಲ್ಲೊಬ್ಬಾತ ಸಣಕಲನಂತೂ ಅಜಯ್ನನ್ನು ಮೇಲಿಂದ ಕೆಳಗೆ ಸ್ಕ್ಯಾನ್ ಮಾಡುವಂತೆಯೇ ನೋಡುತ್ತಿದ್ದ. ಏನೋ ವಿಷಯ ಪ್ರಸ್ತಾಪಿಸಲು ಆತ ಹವಣಿಸುತ್ತಿರುವವನಂತೆ ಕಂಡರೂ, ಅಕ್ಕಪಕ್ಕದವರನ್ನು ನೋಡಿ ಹಿಂಜರಿಯುತ್ತಿರುವಂತೆ ಅಜಯ್‌ಗೆ ಭಾಸವಾಯಿತು. ಯಾರೀತ? ತನ್ನನ್ನು ಯಾಕೆ ಹಾಗೆ ನೋಡುತ್ತಿದ್ದಾನೆ? ಎಂಬ ಶಂಕೆ ಮೂಡಿತು. ಬೀಡಾ ಜಗಿದು ಉಗುಳುತ್ತಾ ಅವರೆಡೆಗೆ ಮುಗುಳ್ನಕ್ಕ. ಅಷ್ಟಕ್ಕೇ ಗೆಲುವಾದ ಆಗಂತುಕ